ಶ್ರೀ ಮಿರಾಜುದ್ದೀನ್, ಎನ್ ಪಟೇಲ್ (ಪೌರಾಡಳಿತ ರಾಜ್ಯ ಸಚಿವರು.) :

ಅ) 'ಎ' ದರ್ಜೆ - 3
'ಬಿ' ದರ್ಜೆ - 1
'ಸಿ' ದರ್ಜೆ - 153
'ಡಿ' ದರ್ಜೆ - 233
ಒಟ್ಟು - 390

ಆ) ನಗರ ಪಾಲಿಕೆಯ ಆರ್ಥಿಕ ಪರಿಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು ಹಂತ ಹಂತವಾಗಿ ಹಾಗೂ ಆದ್ಯತೆಯ ಅನುಗುಣವಾಗಿ ಕನಿಷ್ಟ ಹುದ್ದೆಗಳನ್ನು ಮಂಜೂರು ಮಾಡಲಾಗುವುದು.

ಇ) ಮಂಗಳೂರು ಮಹಾನಗರ ಪಾಲಿಕೆಗೆ ಯಾವುದೇ ಹೆಚ್ಚುವರಿ ಅನುದಾನ ನೀಡಿರುವುದಿಲ್ಲ. ಹಾಗೂ ಸದರಿ ಮಹಾನಗರ ಪಾಲಿಕೆಗೆ ಬಾಕಿ ನೀಡಬೇಕಾದ ಸರ್ಕಾರದ ಅನುದಾನ ಯಾವುದೂ ಇರುವುದಿಲ್ಲ.

ಉಪಾಧ್ಯಕ್ಷರು : ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳ ಉತ್ತರಗಳನ್ನು ಸದನದ ಮುಂದೆ ಮಂಡಿಸಲಾಯಿತು.

(3) ಸಭೆಯ ಮುಂದಿಡಲಾದ ಕಾಗದಪತ್ರಗಳು

ಶ್ರೀ ಡಿ.ಮಂಜುನಾಥ್ (ಅರಣ್ಯ ಸಚಿವರು)ಮಾನ್ಯ ಅಧ್ಯಕ್ಷರೆ,

ಶ್ರೀ ಎಂ.ಪಿ.ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಹಾಗೂ ವಾರ್ತಾ ಮಂತ್ರಿ) ಅವರ ಪರವಾಗಿ

1993ರ ಕರ್ನಾಟಕ ಪಂಚಾಯತ್‌ರಾಜ್ ಅಧಿನಿಯಮ 300(5)ನೇ ಪ್ರಕರಣದ ಮೇರೆಗೆ,

1) 1997-98ನೇ ಸಾಲಿನ ಹಾಸನ ಜಿಲ್ಲಾ ಪಂಚಾಯತ್‌ನ ವಾರ್ಷಿಕ ಆಡಳಿತ ವರದಿ.
2) 1997-98ನೇ ಸಾಲಿನ ಚಿತ್ರದುರ್ಗ ಜಿಲ್ಲಾ ಪಂಚಾಯತ್‌ನ ವಾರ್ಷಿಕ ಆಡಳಿತ ವರದಿ.
3) 1997-98ನೇ ಸಾಲಿನ ಕೋಲಾರ ಜಿಲ್ಲಾ ಪಂಚಾಯತ್‌ನ ವಾರ್ಷಿಕ ಆಡಳಿತ ವರದಿ.
4) 1996-97, 1997-98ನೇ ಸಾಲಿನ ಬೆಂಗಳೂರು ಗ್ರಾಮಾಂತರ ಜಿಲ್ಲಾ ಪಂಚಾಯತ್‌ನ ವಾರ್ಷಿಕ ಆಡಳಿತ ವರದಿ.
5) 1997-98ನೇ ಸಾಲಿನ ಬೆಂಗಳೂರು ನಗರ ಜಿಲ್ಲಾ ಪಂಚಾಯತ್‌ನ ವಾರ್ಷಿಕ ಆಡಳಿತ ವರದಿ, 1993ರ ಕರ್ನಾಟಕ ಪಂಚಾಯತ್‌ರಾಜ್ ಅಧಿನಿಯಮದ 262(3)ನೇ ಪ್ರಕರಣದ ಮೇರೆಗೆ.
6) 1996-97ನೇ ಸಾಲಿನ ಮೈಸೂರು ಜಿಲ್ಲಾ ಪಂಚಾಯತ್‌ನ ಲೆಕ್ಕಪರಿಶೋಧನಾ ವರದಿ.
7) 1996-97ನೇ ಸಾಲಿನ ಗುಲ್ಬರ್ಗ ಜಿಲ್ಲಾ ಪಂಚಾಯತ್‌ನ ಲೆಕ್ಕ ಪರಿಶೋಧನಾ ವರದಿ.
8) 1996-97ನೇ ಸಾಲಿನ ಬೆಳಗಾವಿ ಜಿಲ್ಲಾ ಪಂಚಾಯತ್‌ನ ಲೆಕ್ಕ ಪರಿಶೋಧನಾ ವರದಿ.
9) 1996-97ನೇ ಸಾಲಿನ ಶಿವಮೊಗ್ಗಾ ಜಿಲ್ಲಾ ಪಂಚಾಯತ್‌ನ ಲೆಕ್ಕ ಪರಿಶೋಧನಾ ವರದಿ..
10) 1996-97ನೇ ಸಾಲಿನ ಕೊಡಗು ಜಿಲ್ಲಾ ಪಂಚಾಯತ್‌ನ ಲೆಕ್ಕ ಪರಿಶೋಧನಾ ವರದಿ.
11) 1996-97ನೇ ಸಾಲಿನ ಕೋಲಾರ ಜಿಲ್ಲಾ ಪಂಚಾಯತ್‌ನ ಲೆಕ್ಕ ಪರಿಶೋಧನಾ ವರದಿ.
12) 1996-97ನೇ ಸಾಲಿನ ಹಾಸನ ಜಿಲ್ಲಾ ಪಂಚಾಯತ್‌ನ ಲೆಕ್ಕ ಪರಿಶೋಧನಾ ವರದಿ.
13) 1996-97ನೇ ಸಾಲಿನ ದಕ್ಷಿಣ ಕನ್ನಡ ಜಿಲ್ಲಾ ಪಂಚಾಯತ್‌ನ ಲೆಕ್ಕ ಪರಿಶೋಧನಾ ವರದಿ.

14) 1996-97ನೇ ಸಾಲಿನ ಮಂಡ್ಯ ಜಿಲ್ಲಾ ಪಂಚಾಯತ್‌ನ ಲೆಕ್ಕಾಪರಿಶೋಧನಾ ವರದಿಗಳನ್ನು ಮಂಡಿಸುತ್ತೇನೆ.

II **ಶ್ರೀ ಡಿ. ಮಂಜುನಾಥ** (ಅರಣ್ಯ ಮಂತ್ರಿ)ಮಾನ್ಯಅಧ್ಯಕ್ಷರೆ. 1956 ಕಂಪನಿಗಳ ಕಾಯ್ದೆಯ 619 (ಎ)ಪ್ರಕರಣದ ಮೇರೆಗೆ. 1997-98 ನೇ ಸಾಲಿನ ಕರ್ನಾಟಕ ಅರಣ್ಯ ಅಭಿವೃದ್ಧಿ ನಿಗಮ ನಿಯಂತ್ರಣದ ಕರ್ನಾಟಕ ಪಲ್ಪ್‌ವುಡ್ ನಿಯಮಿತದ ವಾರ್ಷಿಕ ವರದಿಯನ್ನು ಮಂಡಿಸುತ್ತೇನೆ.

III **ಶ್ರೀ ಡಿ. ಮಂಜುನಾಥ್** (ಅರಣ್ಯಸಚಿವರು):- ಶ್ರೀ ಸಿ.ಬೈರೇಗೌಡ (ಕೃಷಿ ಮತ್ತು ತೋಟಗಾರಿಕೆ ಮಂತ್ರಿ) ಅವರ ಪರವಾಗಿ 1963 ಕೃಷಿ ವಿಶ್ವವಿದ್ಯಾನಿಲಯ ಕಾಯ್ದೆಯ 38(3)ನೇ ಕಲಂ ಮೇರೆಗೆ 1997-98ನೇ ಸಾಲಿನ ಧಾರವಾಡದ ಕೃಷಿ ವಿಶ್ವವಿದ್ಯಾನಿಲಯದ ವಾರ್ಷಿಕ ವರದಿಯನ್ನು ಮಂಡಿಸುತ್ತೇನೆ.

IV **ಶ್ರೀ ಡಿ. ಮಂಜುನಾಥ** (ಅರಣ್ಯ ಸಚಿವರು):-

ಶ್ರೀ ಜಿ.ಬಿ.ಬಸವಣ್ಣಪ್ಪ (ಆಹಾರ ಮತ್ತು ನಾಗರೀಕ ಸರಬರಾಜು ಮಂತ್ರಿ)ಅವರು ಪರವಾಗಿ1956 ಕಂಪನಿಗಳ ಕಾಯ್ದೆಯ 619 (ಎ)ಪ್ರಕರಣದ ಮೇರೆಗೆ. 1997-98ನೇ ಸಾಲಿನ ಆಹಾರ ನಾಗರೀಕ ಸರಬರಾಜು ನಿಗಮದ ವಾರ್ಷಿಕ ವರದಿಯನ್ನು ಮಂಡಿಸುತ್ತೇನೆ.

V **ಶ್ರೀ ಡಿ. ಮಂಜುವಾಥ್** (ಅರಣ್ಯ ಸಚಿವರು) : ಮಾನ್ಯ ಅಧ್ಯಕ್ಷರೆ ಶ್ರೀ ಕೆ.ಎಂ. ಕೃಷ್ಣಾರೆಡ್ಡಿ (ಸಮಾಜ ಕಲ್ಯಾಣ ಮಂತ್ರಿ) ಅವರ ಪರವಾಗಿ, 1956ರ ಕಂಪನಿಗಳ ಕಾಯ್ದೆಯ 619 (ಎ)ಪ್ರಕರಣದ ಮೇರೆಗೆ. 1997-98ನೇ ಸಾಲಿನ ಕರ್ನಾಟಕ ಪರಿಶಿಷ್ಟಜಾತಿ ಮತ್ತು ಪರಿಶಿಷ್ಟ ವರ್ಗಗಳ ವಾರ್ಷಿಕ ಹಾಗೂ ಲೆಕ್ಕಪರಿಶೋಧನಾ ವರದಿಯನ್ನು ಮಂಡಿಸುತ್ತೇನೆ.

VI ಡಿ. ಮಂಜುನಾಥ್ (ಅರಣ್ಯಸಚಿವರು) ಮಾನ್ಯ ಅಧ್ಯಕ್ಷರೆ, ಶ್ರೀ ಎಂ. ಎಸ್. ಪಾಟೀಲ್ ನಗರಾಭಿವೃದ್ಧಿ ಮಂತ್ರಿ) ಅವರ ಪರವಾಗಿ 1997ರ ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರದ ಅಧಿನಿಯಮ 48 (5)ಹಾಗೂ 49ನೇ ಕಲಂ ಮೇರೆಗೆ.

1) 1998-99ನೇ ಸಾಲಿನ ಹೊಸಪೇಟೆ ನಗರಾಭಿವೃದ್ಧಿ ಪ್ರಾಧಿಕಾರದ ವಾರ್ಷಿಕ ವರದಿ.
2) 1998-99ನೇ ಸಾಲಿನ ಚಿತ್ರದುರ್ಗ ನಗರಾಭಿವೃದ್ಧಿ ಪ್ರಾಧಿಕಾರದ ವಾರ್ಷಿಕ ವರದಿ.
3) 1997-98ನೇ ಸಾಲಿನ ಹೊಸಪೇಟೆ ನಗರಾಭಿವೃದ್ಧಿ ಪ್ರಾಧಿಕಾರದ ಲೆಕ್ಕಪರಿಶೋಧನಾ ವರದಿ.
4) 1997-98ನೇ ಸಾಲಿನ ಚಿತ್ರದುರ್ಗ ನಗರಾಭಿವೃದ್ಧಿ ಪ್ರಾಧಿಕಾರದ ಲೆಕ್ಕಪರಿಶೋಧನಾ ವರದಿ.
5) 1997-98ನೇ ಸಾಲಿನ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ವಾರ್ಷಿಕ ಆಡಳಿತ ವರದಿ.
6) 1998-99ನೇ ಸಾಲಿನ ಕೋಲಾರ ನಗರಾಭಿವೃದ್ಧಿ ಪ್ರಾಧಿಕಾರದ ವಾರ್ಷಿಕ ಆಡಳಿತ ವರದಿ.
7) 1997-98ನೇ ಸಾಲಿನ ಕೋಲಾರ ನಗರಾಭಿವೃದ್ಧಿ ಪ್ರಾಧಿಕಾರದ ಲೆಕ್ಕಪರಿಶೋಧನಾ ವರದಿ
8) 1998-99ನೇ ಸಾಲಿನ ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರದ ವಾರ್ಷಿಕ ಆಡಳಿತ ವರದಿ.

1973ರ ಕರ್ನಾಟಕ ನಗರ ನೀರು ಸರಬರಾಜು ಹಾಗೂ ಒಳಚರಂಡಿ ಮಂಡಳಿ ಅಧಿನಿಯಮದ 42(2)(ಎ)ಪ್ರಕರಣದ ಮೇರೆಗೆ.

9) 1996-97ನೇ ಸಾಲಿನ ಕರ್ನಾಟಕ ನಗರ ನೀರು ಸರಬರಾಜು ಹಾಗೂ ಒಳಚರಂಡಿ ಮಂಡಳಿಯ ಲೆಕ್ಕಪರಿಶೋಧನಾ ವರದಿಗಳನ್ನು ಮಂಡಿಸುತ್ತೇನೆ.

VII ಶ್ರೀ ಡಿ.ಮಂಜುನಾಥ್ (ಅರಣ್ಯ ಸಚಿವರು)ಮಾನ್ಯ ಅಧ್ಯಕ್ಷರೆ, ಶ್ರೀ ಬಿ.ಎ. ಮೊಯಿದ್ದೀನ್ (ಉನ್ನತ ಶಿಕ್ಷಣ ಮಂತ್ರಿ) ಅವರ ಪರವಾಗಿ 1976ರ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮದ 45(2)ನೇ ಕಲಂ ಮೇರೆಗೆ. 1996-97ನೇ ಸಾಲಿನ ಕರ್ನಾಟಕ ವಿಶ್ವವಿದ್ಯಾನಿಲಯದ ವಾರ್ಷಿಕ ಮತ್ತು ಲೆಕ್ಕಪರಿಶೋಧನಾ ವರದಿಯನ್ನು ಮಂಡಿಸುತ್ತೇನೆ.

VIII ಶ್ರೀ ಬಿ.ಎಲ್. ಶಂಕರ (ಭಾರಿ ಮತ್ತು ಮಧ್ಯಮ ಕೈಗಾರಿಕೆಗಳು ಮಂತ್ರಿ) : ಮಾನ್ಯಅಧ್ಯಕ್ಷರೆ. 1956ರ ಕಂಪನಿಗಳ ಕಾಯ್ದೆಯ 619(ಎ)ಕಲಂ ಮೇರೆಗೆ. 1997-98ನೇ ಸಾಲಿನ ಮೈಸೂರು ಕಾಸ್ಮೆಟಿಕ್ಸ್ ನಿಯಮಿತದ ವಾರ್ಷಿಕ ವರದಿಯನ್ನು ಮಂಡಿಸುತ್ತೇನೆ.

IX ಶ್ರೀ ಡಿ. ಮಂಜುನಾಥ್ (ಅರಣ್ಯ ಸಚಿವರು) : ಮಾನ್ಯ ಅಧ್ಯಕ್ಷರೆ, ಶ್ರೀ ಆರ್.ರೋಷನ್‌ಬೇಗ್ ಪ್ರವಾಸೋದ್ಯಮ ಮೂಲಭೂತ ಸೌಲಭ್ಯ ಅಭಿವೃದ್ಧಿ ಮತ್ತು ವಕ್ಫ್ ರಾಜ್ಯಮಂತ್ರಿಯವರ ಪರವಾಗಿ 1956ರ ಕಂಪನಿಗಳ ಕಾಯ್ದೆಯ ಅಧಿನಿಯಮ 619 (ಎ) ಪ್ರಕರಣದ ಮೇರೆಗೆ 1997-98 ನೇ ಸಾಲಿನ ಅರಣ್ಯ, ವಸತಿ ಮತ್ತು ಆಹಾರ ಧಾಮಗಳ ವಾರ್ಷಿಕ ವರದಿಯನ್ನು ಮಂಡಿಸುತ್ತೇನೆ.

X ಶ್ರೀ ಡಿ.ಮಂಜುನಾಥ್(ಅರಣ್ಯ ಸಚಿವರು) : ಮಾನ್ಯ ಅಧ್ಯಕ್ಷರೆ ಶ್ರೀ ಜಯಪ್ರಕಾಶ್ ಹೆಗ್ಡೆ (ಮೀನುಗಾರಿಕೆ ಮತ್ತು ಬಂದರು ರಾಜ್ಯ ಮಂತ್ರಿ)ಅವರ ಪರವಾಗಿ 1956ರ ಕಂಪನಿಗಳ ಕಾಯ್ದೆಯ 619 (ಎ)ಮೇರೆಗೆ. 1996-97ನೇ ಸಾಲಿನ ಕರ್ನಾಟಕ ಒಳನಾಡು ಮೀನುಗಾರಿಕೆ ಅಭಿವೃದ್ಧಿ ನಿಗಮ ನಿಯಮಿತದ ಲೆಕ್ಕಪರಿಶೋಧನಾ ವರದಿಯನ್ನು ಮಂಡಿಸುತ್ತೇನೆ.

XI ಶ್ರೀ ಡಿ.ಮಂಜುನಾಥ್ (ಅರಣ್ಯ ಸಚಿವರು) :- ಮಾನ್ಯ ಅಧ್ಯಕ್ಷರೆ, ಶ್ರೀ ಬಿ.ಬಿ.ನಿಂಗಯ್ಯ (ಪಶುಸಂಗೋಪನೆ ರಾಜ್ಯ ಮಂತ್ರಿ) ಪರವಾಗಿ 1973ರ ಕರ್ನಾಟಕ ಕುರಿ ಮತ್ತು ಕುರಿಉತ್ಪನ್ನಗಳ ಅಭಿವೃದ್ಧಿ ಅಧಿನಿಯಮದ 24ನೇ ಕಲಮಿನ ಮೇರೆಗೆ. 1997-98ನೇ ಸಾಲಿನ ಕರ್ನಾಟಕ ಕುರಿ ಮತ್ತು ಕುರಿ ಉತ್ಪನ್ನಗಳ ಅಭಿವೃದ್ಧಿ ಮಂಡಳಿಯ ವಾರ್ಷಿಕ ವರದಿಯನ್ನು ಮಂಡಿಸುತ್ತೇನೆ.

XII ಶ್ರೀ ಡಿ. ಮಂಜುನಾಥ್ (ಅರಣ್ಯ ಸಚಿವರು):- ಮಾನ್ಯ ಅಧ್ಯಕ್ಷರೆ ಶ್ರೀ ವಿ. ಸೋಮಣ್ಣ (ಬೆಂಗಳೂರು ನಗರಾಭಿವೃದ್ಧಿ ರಾಜ್ಯ ಮಂತ್ರಿ)ಪರವಾಗಿ 1976ರ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ 47ಎ ಪ್ರಕರಣದ ಮೇರೆಗೆ, 1996-97ನೇ ಸಾಲಿನ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಲೆಕ್ಕಪತ್ರಗಳು ಮತ್ತು ಲೆಕ್ಕಪರಿಶೋಧನಾ ವರದಿಯನ್ನು ಮಂಡಿಸುತ್ತೇನೆ.

XIII ಶ್ರೀ ಡಿ. ಮಂಜುನಾಥ್ (ಅರಣ್ಯ ಸಚಿವರು):- ಮಾನ್ಯ ಅಧ್ಯಕ್ಷರೆ ಶ್ರೀ ಕೆ. ವೆಂಕಟೇಶ್ (ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ರಾಜ್ಯ ಮಂತ್ರಿ)ಅವರ ಪರವಾಗಿ
1960 ಕಾಡಾ ಅಧಿನಿಯಮದ 20ನೇ ಕಲಂ ಮೇರೆಗೆ.

1) 1996-97ನೇ ಸಾಲಿನ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರ ತುಂಗಭದ್ರ ಯೋಜನೆ, ಮುನಿರಾಬಾದ್, ವಾರ್ಷಿಕ ವರದಿ.

2) 1997-98ನೇ ಸಾಲಿನ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರ ತುಂಗಭದ್ರಾ ಯೋಜನೆ, ಮುನಿರಾಬಾದ್ ವಾರ್ಷಿಕ ವರದಿಗಳನ್ನು ಮಂಡಿಸುತ್ತೇನೆ.

XIV ಶ್ರೀ ಡಿ.ಮಂಜುನಾಥ್ (ಅರಣ್ಯ ಸಚಿವರು) ಮಾನ್ಯ ಅಧ್ಯಕ್ಷರೆ ಶ್ರೀ ಡಿ. ನಾಗರಾಜಯ್ಯ (ರೇಷ್ಮೆ ರಾಜ್ಯ ಮಂತ್ರಿ)ಅವರ ಪರವಾಗಿ 1956ರ ಕಂಪನಿಗಳ ಕಾಯ್ದೆಯ 619)(ಎ)ಪ್ರಕರಣದ ಮೇರೆಗೆ. 1997-98 ನೇ ಸಾಲಿನ ಕರ್ನಾಟಕ ರೇಷ್ಮೆ ಕೈಗಾರಿಕಾ ನಿಗಮ ನಿಯಮಿತದ ವಾರ್ಷಿಕ ವರದಿಯನ್ನು ಮಂಡಿಸುತ್ತೇನೆ.

ಉಪಾಧ್ಯಕ್ಷರು :- ಎಲ್ಲಾ ಕಾಗದ ಪತ್ರಗಳನ್ನು ಸದನದ ಮುಂದೆ ಮಂಡಿಸಲಾಯಿತು.

4. ಸದನದಲ್ಲಿ ಸಚಿವರುಗಳ ಕಡಿಮೆ ಹಾಜರಾತಿ ಕುರಿತು

ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕ): ಮಾನ್ಯ ಉಪಾಧ್ಯಕ್ಷರೆ, ಇದು ನನಗೆ ಅರ್ಥವಾಗುವುದಿಲ್ಲ ಇದು ಎರಡನೆಯ ದಿವಸ.

ಶ್ರೀ ವಾಟಾಳ್‌ನಾಗಾರಾಜ್ : ಇಂತಹ ಮಂತ್ರಿಗಳ ಪರವಾಗಿ ಕಾಗದ ಪತ್ರಗಳನ್ನು ಸಭೆಯ ಮುಂದಿಡುತ್ತೇನೆ ಎನ್ನುವುದು ನಿತ್ಯ ಮಂತ್ರವಾಗಿ ಹೋಯಿತು. ಅರೆ ಶಿವಾ, ಇದೇನು ಹೀಗಾಗುತ್ತಿದೆ? ಇದೇನು ಹುಡುಗಾಟನಾ? ಈ ರಾಜ್ಯದ ಜನತೆಗಾದರೂ ನೀವು ಹೆದರುವುದಿಲ್ಲವೇನು? ಈ ಸದನದಲ್ಲಿ ನೀವು ಇಚ್ಛೆ ಬಂದ ಹಾಗೆ ಮಾತನಾಡುತ್ತೀರಿ. ಇಷ್ಟೊಂದು ಬೇಜವಾಬ್ದಾರಿ ತೆಗೆದು ಕೊಳ್ಳಬಾರದು.

ಉಪಾಧ್ಯಕ್ಷರು: ಕಾಗದ ಪತ್ರಗಳನ್ನು ಸಭೆಯ ಮುಂದೆ ಮಂಡಿಸಲಾಯಿತು.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಉಪಾಧ್ಯಕ್ಷರೆ, ಈಗ ಏನಾಗಿದೆ ಅಂದರೆ ತಾವು ಸಲಿಗೆ ಕೊಟ್ಟಷ್ಟು ಅದನ್ನು ಅವರು ದುರುಪಯೋಗಪಡಿಸಿಕೊಳ್ಳುತ್ತಿದ್ದಾರೆ. ಮನುಷ್ಯನಿಗೆ ಏನಾದರೂ ಒಂದು ಸಾರಿ ಅಂದರೆ ಮನಸ್ಸಿಗೆ ನೋವಾಗುತ್ತದೆ. ಇವರಿಗೆ ನೋವು ಏಕೆ ಆಗುವುದಿಲ್ಲ ? ಫೀಲಿಂಗ್ಸ್ ಇವರಿಗೆ ಏಕೆ ಆಗುವುದಿಲ್ಲ ? ಇದು ನನಗೆ ಅರ್ಥನೇ ಆಗುವುದಿಲ್ಲ. ಸ್ವಲ್ಪವಾದರೂ ಏನಾದರೂ ಅನ್ನುತ್ತಾರೆ ನಾವು ಜನರಿಗೆ ಮುಖ ತೋರಿಸಬೇಕು. ದಿನಾ ಪತ್ರಿಕೆಗಳಲ್ಲಿ ಸದನದಲ್ಲಿ ಮಂತ್ರಿಗಳು ಇಲ್ಲ ಇಲ್ಲವೆಂದು ಬರುತ್ತದೆ ಎಂಬುದೂ ಇವರಿಗೆ ಅರ್ಥವಾಗುತ್ತಿಲ್ಲ. ಒಂದು ದಿನ ಇಲ್ಲ ಕನಿಷ್ಟ ಪಕ್ಷ ಎರಡನೆಯ ದಿವಸವಾದರೂ ಮಂತ್ರಿಗಳು ಇರಬೇಕಲ್ಲಾ. ಕೌನ್ಸಿಲ್‌ನಲ್ಲಿ ಇದ್ದಾರೆಂದರೆ ಇದು ಬಹಳ ಮುಖ್ಯವಾದುದು.

ಶ್ರೀ ವಾಟಾಳ ನಾಗರಾಜ್ : ಇದು ಎಮ್ಮೆ ಚರ್ಮದ ಸರ್ಕಾರ.

Sri Mallikarjuna Kahrge : This House is most important. This is the main house which creates that house. Tomorrow if we pass a resolution that house will be abolished.

ಶ್ರೀ ಡಿ. ಮಂಜುನಾಥ : ಕೌನ್ಸಿಲ್‌ನಲ್ಲಿ ಅವರದ್ದು ಬಿಸಿನೆಸ್ ಇದೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಇರಬಹುದು. ಅಲ್ಲಿ ಎಷ್ಟು ಜನ ಇದ್ದಾರೆ? ನೀವು ಓದಿದರಲ್ಲಾ ಅವರೆಲ್ಲರೂ ಅಲ್ಲಿದ್ದಾರೆಯೆ? ಆಗಲಿ, ಅಲ್ಲಿ ಎಷ್ಟು ಜನ ಅಲ್ಲಿದ್ದಾರೆಂದು ನೋಡೋಣ ಯಾರನ್ನಾದರೂ ಕಳುಹಿಸಿ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳು ಈ ಸದನಕ್ಕೆ ಬರುತ್ತಿಲ್ಲ. ಅದಕ್ಕೆ ಕಾರಣವೇನೆಂದು ಕೇಳುತ್ತಿದ್ದೇನೆ. ಅವರಿಗೆ ಹುಷಾರಿಲ್ಲವೆಂದು ಹೇಳುತ್ತಿದ್ದಾರೆ. ಯಾರನ್ನೂ ಮನೆಗೆ ಬಿಡುತ್ತಿಲ್ಲವೆಂದು ಹೇಳುತ್ತಿದ್ದಾರೆ. ಅದಕ್ಕೆ ಕಾರಣವೇನು? ಹುಷಾರಿಲ್ಲವೆನ್ನುವುದಕ್ಕೆ ಏನು ಕಾರಣವೆಂದು ಸರ್ಕಾರದ ಪರವಾಗಿ ಯಾರಾದರೂ ಹೇಳಬೇಕಲ್ಲ. ಮುಖ್ಯಮಂತ್ರಿಗಳು ಈ